# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 179/2023

**ಪಿರ್ಯಾದಿದಾರರು** – ಸರ್ಕಾರದ ಪರವಾಗಿ **ಹಿರಿಯೂರು ನಗರ ಪೊಲೀಸರು**

– ವಿರುದ್ಧ –

**ಆರೋಪಿ** – **ಹುಸೇನ್ ತಂದೆ ಹುಸೇನ್ ಸಾಬ್ ,**
30 ವರ್ಷ, ವಾಸಃ ಡಿ.ಸಿ ಕಾಲೋನಿ,
ಹಿರಿಯೂರು ಟೌನ್.

## – ದೋಷಾರೋಪಣೆ –

**ಶ್ರೀ ಗಂಗಾಧರ ಚನ್ನಬಸಪ್ಪ ಹಡಪದ** 2 ನೇ *ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿತ್ರದುರ್ಗ* ಆದ ನಾನು ಆರೋಪಿಯಾದ ನಿನ್ನ ಮೇಲೆ ಈ ಕೆಳಕಂಡಂತೆ ಆರೋಪಿಸುವುದೇನೆಂದರೆಃ–

ದಿಃ 18.05.2024 ರಂದು ರಾತ್ರಿ 7.30 ಗಂಟೆಗೆ ಚಾಸಾ 1 ರವರು ಚಾಸಾ –6 ರವರ ಮನೆಯಲ್ಲಿ ಊಟ ಮಾಡಿಕೊಂಡು ಹಿರಿಯೂರಿನ ಕೆ.ಎಂ. ಕೊಟ್ಟಿಯ ನಾರಿನ ಮಿಲ್ ಹತ್ತಿರ ನಡೆದುಕೊಂಡು ಬರುತ್ತಿರುವಾಗ ಆರೋಪಿಯಾದ ನೀನು ಅಡ್ಡಗಟ್ಟಿ ನಿಲ್ಲಿಸಿದ್ದು **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ ಕಲಂ 341 ರ** ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ .

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಚಾಸಾ 1 ರವರು ಚಾಸಾ –6 ರವರ ಮನೆಯಲ್ಲಿ ಊಟ ಮಾಡಿಕೊಂಡು ಹಿರಿಯೂರಿನ ಕೆ.ಎಂ. ಕೊಟ್ಟಿಯ ನಾರಿನ ಮಿಲ್ ಹತ್ತಿರ ನಡೆದುಕೊಂಡು ಬರುತ್ತಿರುವಾಗ ಆರೋಪಿಯಾದ ನೀನು ಅಡ್ಡಗಟ್ಟಿ ನಿಲ್ಲಿಸಿ ಸೂಳೇ ಮಗನೆ , ಬೋಳಿ ಮಗನೆ ಅಂತ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು , **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ**

**ಸಂಹಿತೆಯ ಕಲಂ 504 ರ ಅಡಿ** ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ .

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀನು ಚಾಸಾ –1 ರವರಿಗೆ ಕೈ ಕಾಲುಗಳಿಂದ ಎದೆಗೆ , ಬೆನ್ನಿಗೆ , ಸೊಂಟಕ್ಕೆ ಬಲಕಾಲಿನಿಂದ ಎದೆಗೆ ಹೊಡೆದು ನೋವುಂಟು ಮಾಡಿದ್ದು , **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆಯ ಕಲಂ 323 ರ ಅಡಿ** ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ .

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀನು ಚಾಸಾ –1 ರವರಿಗೆಅಲ್ಲೆ ಇದ್ದ ಕಾಡುಕಲ್ಲು ತೆಗೆದುಕೊಂಡು ಹೊಡೆದಿದ್ದು , **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆಯ ಕಲಂ 324 ರ ಅಡಿ** ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ .

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀನು ಚಾಸಾ –1 ರವರಿಗೆ ಕಾಡು ಕಲ್ಲು ತೆಗೆದುಕೊಂಡು ಇದರಿಂದ ಹೊಡೆದರೆ ಪ್ರಾಣ ಹೋಗುತ್ತದೆ ಎಯಿ ಗೊತ್ತಿದ್ದರೂ ಸಹ ಉದ್ದೇಶದಿಂದ ಪೂರ್ವಕವಾಗಿ ಚಾಸಾ –1 ರವರನ್ನು ಹೊಡೆದು ರಕ್ತಗಾಯಪಡಿಸಿ ಸಾಯಿಸಲು ಪ್ರಯತ್ನಿಸಿದ್ದು **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ ಕಲಂ 307** ರ ಅಡಿ **ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ .**

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಚಾಸಾ –1 ರವರಿಗೆ ಬದುಕಿದ್ದೀಯಾ ಮತ್ತೊಮ್ಮೆ ನನ್ನ ತಂಟೆಗೆ ಬಂದರೆ ಪ್ರಾಣ ತೆಗೆಯುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದ್ದು

**ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ ಕಲಂ 506 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರಿ .**

ಈ ಮೇಲಿನ ಆಪಾದನೆಗೆ ನಿನ್ನ ಮೇಲೆ ವಿಚಾರಣೆ ನಡೆಸಲಾಗುವುದು.

**(ಗಂಗಾಧರ ಚನ್ನಬಸಪ್ಪ ಹಡಪದ)**
**2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

## 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 179/2023

**ಪಿರ್ಯಾದಿದಾರರು** – ಸರ್ಕಾರದ ಪರವಾಗಿ **ಹಿರಿಯೂರು ನಗರ ಪೊಲೀಸರು**

– ವಿರುದ್ಧ –

**ಆರೋಪಿ** – **ಹುಸೇನ್ ತಂದೆ ಹುಸೇನ್ ಸಾಬ್ ,**
30 ವರ್ಷ, ವಾಸಃ ಡಿ.ಸಿ ಕಾಲೋನಿ,
ಹಿರಿಯೂರು ಟೌನ್.

## — ದೋಷಾರೋಪಣೆ —

1) ಈಗ ಕನ್ನಡದಲ್ಲಿ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೇ?

ಉತ್ತರಃ

2) ಈಗ ಓದಿ ಹೇಳಿದ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀಯೇ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ

ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಅವನಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ವಿವರಿಸಿ ಹೇಳಿಲಾಯಿತು ಹಾಗೂ ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

**(ಗಂಗಾಧರ ಚನ್ನಬಸಪ್ಪ ಹಡಪದ)**
ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.